# ಸ್ವಾಮಿ ವಿವೇಕಾನಂದ ಸಾಂಸ್ಕೃತಿಕ ಕೇಂದ್ರದ ಉದ್ಘಾಟನೆ

ಇತಿಹಾಸಪ್ರಸಿದ್ಧ ಸಾಂಸ್ಕೃತಿಕ ನಗರವಾದ ಕೊಲ್ಕತ ಇನ್ನೊಂದು ಮಹತ್ತ್ವದ ಸಾಂಸ್ಕೃತಿಕ ಕೇಂದ್ರವನ್ನು ಗಳಿಸಿಕೊಂಡ ಹೆಮ್ಮೆಗೆ ಪಾತ್ರವಾಗಿದೆ. ಆಧುನಿಕ ಭಾರತಕ್ಕೆ ನವಚೇತನವನ್ನು ಮೂಡಿಸಿದ ಸ್ವಾಮಿ ವಿವೇಕಾನಂದರ ಪೂರ್ವಿಕರ ಮನೆ ಇಂದು ಜೀರ್ಣೋದ್ಧಾರ ಹೊಂದಿ, ಸಾರ್ವಜನಿಕರಿಗೆ ತೆರೆದಿರಿಸಲ್ಪಟ್ಟಿದೆ.

ಸುಮಾರು ೩೦೦ವರ್ಷಗಳಿಗೂ ಹಳೆಯದಾದ ಈ ಮನೆಯ ಜೀರ್ಣೋದ್ಧಾರದ ಹಿಂದಿನ ಕಥೆಯೇ ಒಂದು ಕೌತುಕ ಸಾಹಸ ಗಾಥೆ. ಅವನ್ನು ೨೦೦೧ ಜುಲೈ ತಿಂಗಳ ವಿವೇಕಪ್ರಭವನ್ನು ಓದಿ ತಿಳಿಯಬಹುದು. ೫ ವರ್ಷಗಳ ಹಿಂದೆ ಪ್ರಾರಂಭವಾದ ಈ ಜೀರ್ಣೋದ್ಧಾರ ಕಾರ್ಯ ಇಂದು ಸಂಪೂರ್ಣ. ಹಳೆಯ ಮನೆಯನ್ನು ಅದು ಹೇಗಿದ್ದಿತ್ತೋ ಅದೇ ರೀತಿ ಪುನರ್ನಿರ್ಮಾಣ ಮಾಡುವುದರ ಜೊತೆಗೆ ಇದರ ಸುತ್ತಮುತ್ತ ಸಾಂಸ್ಕೃತಿಕ ಮತ್ತು ಸಂಶೋಧನಾ ಕೇಂದ್ರ, ಪಠ್ಯ ಪುಸ್ತಕ ಗ್ರಂಥಾಲಯ ಮತ್ತು ಗ್ರಾಮೀಣ ಮತ್ತು ಕೊಳಗೇರಿ ಅಭಿವೃದ್ಧಿ ಕೇಂದ್ರಗಳನ್ನೂ ನಿರ್ಮಿಸಲಾಗಿದ್ದು, ಸ್ವಾಮೀಜಿಯವರಿಗೆ ಒಂದು ಸುಂದರವಾದ ಹಾಗೆಯೇ ಭವ್ಯವಾದ ಸ್ಮಾರಕವಾಗಿ ಈ ಸಮುಚ್ಚಯ ಒಡಮೂಡಿದೆ. ಕೇಂದ್ರ ಮತ್ತು ಪಶ್ಚಿಮ ಬಂಗಾಳ ಸರ್ಕಾರಗಳ ಆರ್ಥಿಕ ಸಹಕಾರದೊಂದಿಗೆ ರೂ.೨೦ ಕೋಟಿಗಳ ವೆಚ್ಚದಲ್ಲಿ ಪೂರ್ಣಗೊಂಡ ಈ ಮಹಾಯೋಜನೆಯ ಉದ್ಘಾಟನೆ ಕಳೆದ ತಿಂಗಳು ನಡೆಯಿತು.



*ಸ್ವಾಮಿ ವಿವೇಕಾನಂದ ಸಾಂಸ್ಕೃತಿಕ ಕೇಂದ್ರ, ಕೊಲ್ಕತ*

ಸೆಪ್ಟೆಂಬರ್ ೨೬ರಂದು ರಾಮಕೃಷ್ಣ ಮಹಾಸಂಘದ ಅಧ್ಯಕ್ಷರಾದ ಪರಮಪೂಜನೀಯ ಶ್ರೀಮತ್ ಸ್ವಾಮಿ ರಂಗನಾಥಾನಂದಜಿ ಮಹಾರಾಜ್‌ರವರು ಸ್ವಾಮಿ ವಿವೇಕಾನಂದರ ಪೂರ್ವಿಕರ ಜೀರ್ಣೋದ್ಧಾರಗೊಂಡ ಮನೆಯನ್ನು ವಿಧ್ಯುಕ್ತವಾಗಿ ಉದ್ಘಾಟಿಸಿದರು. ಸುಮಾರು ೫೦೦ ಸಾಧುಗಳು ಮತ್ತು ೧೦೦೦ಕ್ಕೂ ಹೆಚ್ಚು ಭಕ್ತರು ನೆರೆದಿದ್ದರು. ಅಂದು ತಮ್ಮ ಆಶೀರ್ವಚನದಲ್ಲಿ ಅಧ್ಯಕ್ಷ ಸ್ವಾಮೀಜಿಯವರು, ಸ್ವಾಮಿ ವಿವೇಕಾನಂದರ ಸಂದೇಶಗಳು ಇಂದಿಗೂ ಪ್ರಸ್ತುತ ಎಂದು ತಿಳಿಸಿದರಲ್ಲದೆ, ಈ ಹೊಸ ಸಾಂಸ್ಕೃತಿಕ ಪರಂಪರಾ ಸಮುಚ್ಚಯವು ಸ್ವಾಮೀಜಿಯವರ ಜೀವನ ಮತ್ತು ತತ್ತ್ವಗಳ ಉಚ್ಚಮಟ್ಟದ ಸಂಶೋಧನಾ ಕೇಂದ್ರವಾಗಿ ಪರಿಣಮಿಸುವುದು ಎಂದು ನುಡಿದರು.

ಅಕ್ಟೋಬರ್ ೧ರಂದು ಸಾಂಸ್ಕೃತಿಕ ಕೇಂದ್ರದ ಉದ್ಘಾಟನೆಯನ್ನು ಮಾಡಿದವರು ರಾಷ್ಟ್ರಪತಿ ಡಾ.ಅಬ್ದುಲ್ ಕಲಾಂ ಅವರು. ಅಂದಿನ ದಿನ ಉದ್ಘಾಟನೆಗೆ ಮೊದಲು ರಾಮಕೃಷ್ಣ ಮಹಾಸಂಘದ ಮುಖ್ಯಕೇಂದ್ರವಾದ ಬೇಲೂರು ಮಠಕ್ಕೆ ಭೇಟಿ ಕೊಟ್ಟ ಡಾ. ಕಲಾಂ ಅಲ್ಲಿನ ದೇವಾಲಯಗಳನ್ನು ಮತ್ತು ಸ್ವಾಮಿ ವಿವೇಕಾನಂದರ ಕೊಠಡಿಯನ್ನು ಸಂದರ್ಶಿಸಿದರಲ್ಲದೆ, ಗಂಗೆಯ ಪುಣ್ಯತಟದಲ್ಲಿ ಸ್ವಲ್ಪ ಹೊತ್ತು ನಡೆದಾಡಿದರು. ನಂತರ ಪರಮಪೂಜ್ಯ ಸ್ವಾಮಿ ರಂಗನಾಥಾನಂದಜಿಯವರ ಜೊತೆಗೆ ಸುಮಾರು ೨೦ ನಿಮಿಷ ಕಳೆದರು. ಅಲ್ಲಿಂದ ಹೊರಡುವ ಮುನ್ನ ಪತ್ರಕರ್ತರನ್ನು ಉದ್ದೇಶಿಸಿ ಅವರ ಹೇಳಿದ್ದು ಇಷ್ಟು: "ಈ ಪವಿತ್ರಸ್ಥಾನವು ಸಮಗ್ರತೆಯ ಸಂದೇಶವನ್ನು ಪಸರಿಸುತ್ತಿದೆ. ಇದೊಂದು ಪರಂಪರೆಯ ಸ್ಥಾನ ಮತ್ತು ರಾಷ್ಟ್ರೀಯ ಮಹತ್ವದ ಕ್ಷೇತ್ರ. ಸ್ವಾಮಿ ರಂಗನಾಥಾನಂದರಿಗೆ ನನ್ನ ಶುಭಾಶಯಗಳು."

ಸ್ವಾಮಿ ವಿವೇಕಾನಂದ ಸಾಂಸ್ಕೃತಿಕ ಕೇಂದ್ರವನ್ನು ಉದ್ಘಾಟಿಸಿ, ನೆರೆದಿದ್ದ ಸಾಧುಗಳು ಮತ್ತು ಗಣ್ಯವ್ಯಕ್ತಿಗಳನ್ನು ಉದ್ದೇಶಿಸಿ ಡಾ. ಅಬ್ದುಲ್ ಕಲಾಂ ಮಾತನಾಡಿದರು. ಭಾರತದಲ್ಲಿ ವಿಜ್ಞಾನ ಸಂಶೋಧನಾ ಕೇಂದ್ರವನ್ನು ಆರಂಭಿಸುವಂತೆ ಜೆ.ಎನ್. ಟಾಟಾ ಅವರಿಗೆ ಪ್ರೇರಣೆ ಕೊಟ್ಟವರು ವಿವೇಕಾನಂದರು. ಹಾಗೆಯೇ ಪ್ರಸಿದ್ಧ ಸಸ್ಯವಿಜ್ಞಾನಿ ಜಗದೀಶ ಚಂದ್ರ ಬೋಸರನ್ನು ಉತ್ತೇಜಿಸಿದವರೂ ಅವರೇ. ಸ್ವಾಮಿ ವಿವೇಕಾನಂದರ ಕೃತಿಗಳು ಇಂದಿಗೂ ಅದರಲ್ಲೂ ಈಗಿನ ಕಾಲದ ಯುವಕರಿಗೆ ಬಹಳ ಪ್ರಸ್ತುತವಾಗಿವೆ. ಆದ್ದರಿಂದ ಅವರ ಜೀವನ, ಸಂದೇಶ ಮತ್ತು ಅವರ ಬಗೆಗಿನ ಸಂಶೋಧನಾ ಸಾಮಗ್ರಿಗಳುಳ್ಳ ಡಿಜಿಟಲ್ ಗ್ರಂಥಾಲಯವೊಂದನ್ನು ನೂತನ ಗ್ರಂಥಾಲಯದಲ್ಲಿ ರಾಮಕೃಷ್ಣ ಮಿಷನ್ ಸ್ಥಾಪಿಸಬೇಕು ಹಾಗೂ ಇದನ್ನು ದೇಶದ ಮೂಲೆ ಮೂಲೆಗಳಿಗೂ ಮತ್ತು ಹೊರ ದೇಶಗಳಿಗೂ ಕೂಡ ಇಂಟರ್‌ನೆಟ್ ಮೂಲಕ ಸಂಪರ್ಕಿಸುವ ವ್ಯವಸ್ಥೆ ಆಗಬೇಕು. ಸ್ವಾಮೀಜಿಯವರ ಕನಸನ್ನು ನನಸಾಗಿಸುವ ದಿಕ್ಕಿನಲ್ಲಿ ಮಾಡಿದ ಒಂದು ಸರಿಯಾದ ಕ್ರಮ ಇದಾಗುತ್ತದೆ. ಕೇವಲ ಕೆಲವು ಗುಂಡಿಗಳನ್ನು ಒತ್ತುವುದರ ಮೂಲಕ ದೇಶದ ಯಾವ ಮೂಲೆಯಲ್ಲಿಯಾದರೂ ಇರುವ ಜನರಿಗೆ ಸ್ವಾಮಿ ವಿವೇಕಾನಂದರ ಆದರ್ಶಗಳು ಮತ್ತು ಸಂದೇಶಗಳನ್ನು ಒಮ್ಮೆಗೇ ತಲುಪಿಸುವ ಕಾರ್ಯ ಈ ಮೂಲಕ ಸಾಧ್ಯವಾಗುತ್ತದೆ. ಹೀಗೆಲ್ಲ ನುಡಿದ ಡಾ. ಕಲಾಂ ಗ್ರಾಮೀಣ ಅಭಿವೃದ್ಧಿಗಾಗಿ ಪುರ (PURA) ಎನ್ನುವ ಕಲ್ಪನೆಯನ್ನು ಪ್ರಸ್ತುತಪಡಿಸುತ್ತ, ನಗರದಲ್ಲಿರುವ ನಾಗರಿಕ ಸೌಲಭ್ಯಗಳು ಹಳ್ಳಿಗಾಡಿನಲ್ಲಿಯೂ ದೊರೆತರೆ, ಗ್ರಾಮಗಳಿಂದ ನಗರಪ್ರದೇಶಗಳಿಗೆ ಜನರು ವಲಸೆ ಬರುವುದು ತಪ್ಪುತ್ತದೆ. ಗ್ರಾಮೀಣ ಜೀವನವನ್ನು ಸಂಪದ್ಭರಿತಗೊಳಿಸುವಲ್ಲಿ ಗ್ರಾಮೀಣ ಸಂಪರ್ಕ ಮಹತ್ವವಾದದ್ದು ಎಂದು ಹೇಳಿದರು. ಸುಪ್ತಾತ್ಮವನ್ನು ಎಚ್ಚರಗೊಳಿಸಿಕೊಳ್ಳಿ ಎನ್ನುವ ಸ್ವಾಮಿ ವಿವೇಕಾನಂದರ ಸಂದೇಶವನ್ನು ಸ್ಮರಿಸಿಕೊಂಡ ಡಾ. ಕಲಾಂ ಅವರು ಪ್ರಜ್ಞೆಯ ವಿಕಾಸವೆಂದರೆ ಹೃದಯದಲ್ಲಿರುವ ಒಳ್ಳೆಯತನದ ವಿಕಾಸ. ಅದಾದಾಗ ಚಾರಿತ್ರ್ಯವು ಸುಂದರವಾಗುವುದು, ಅದರಿಂದ ಮನೆಗಳಲ್ಲಿ ಸಾಮರಸ್ಯ ಮೂಡುವುದು. ಮನೆಮನೆಗಳಲ್ಲಿ ಸಾಮರಸ್ಯ ಮೂಡಿದಾಗ ದೇಶದಲ್ಲಿ ಮತ್ತು ಕಡೆಗೆ ಇಡೀ ವಿಶ್ವದಲ್ಲಿ ಶಾಂತಿ ನೆಲೆಗೊಳ್ಳುವುದು ಎಂದು ಮಾರ್ಮಿಕವಾಗಿ ನುಡಿದರು.

ವಿ|ಪ್ರ